
# ಜ್ಞಾನಶಕ್ತಿ

ಮಾಸ ಪತ್ರಿಕೆ

JNANASHAKTHI

ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

ಸಂಪುಟ - 14 Reg. No. : KARBIL / 2005 / 16123 ಮಾರ್ಚ್ - 2025 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 03 ಪ್ರಕಟಣೆ : 28-03-2025

## ಬೆಂಗಳೂರಿನ ನಿರ್ಮಲ ನೃತ್ಯನಿಕೇತನ ಕಲ್ಚರಲ್ & ಚಾರಿಟೇಬಲ್ ಟ್ರಸ್ಟ್‌ನ ಸುವರ್ಣಮಹೋತ್ಸವ ಸಮಾರಂಭ ಹಾಗೂ ನಾಟ್ಯರಾಣಿ ಶಾಂತಲಾ ಪ್ರಶಸ್ತಿ ಪುರಸ್ಕೃತ ನಾಟ್ಯಾಚಾರ್ಯ ಕೀರ್ತಿಶೇಷ ಶ್ರೀ ಯು. ಎಸ್. ಕೃಷ್ಣ ರಾವ್, ಮಂಗಳೂರು ಅವರ

## 111ನೆಯ ಜನ್ಮದಿನದ ಸಂಸ್ಮರಣಾ ಸಮಾರಂಭ

ನಿರ್ಮಲ ನೃತ್ಯನಿಕೇತನ ಕಲ್ಚರಲ್ ಆಂಡ್ ಚಾರಿಟೇಬಲ್ ಟ್ರಸ್ಟ್, ವಿಜಯನಗರ, ಬೆಂಗಳೂರು ಈ ಸಂಸ್ಥೆಯ ಸುವರ್ಣಮಹೋತ್ಸವ ಹಾಗೂ ಕರ್ನಾಟಕದ ಹಿರಿಯ ಗುರುಗಳಾದ ನಾಟ್ಯಾಚಾರ್ಯ, ನಾಟ್ಯರಾಣಿ ಶಾಂತಲಾ ಪ್ರಶಸ್ತಿ ಪುರಸ್ಕೃತ ಕೀರ್ತಿಶೇಷ ಶ್ರೀ ಯು. ಎಸ್. ಕೃಷ್ಣ ರಾವ್, ಮಂಗಳೂರು ಇವರ 111ನೆಯ ಜನ್ಮದಿನದ ಸಂಸ್ಮರಣೆಯನ್ನು ದಿನಾಂಕ 02-02-2025ರಂದು 'ನಯನ ರಂಗಮಂದಿರ'ದಲ್ಲಿ ವಿಜೃಂಭಣೆಯಿಂದ ಕಿಕ್ಕಿರಿದು ಸೇರಿದ್ದ ಸಭಿಕರೆದುರು ಆಚರಿಸಿತು. ಈ ಸಂಭ್ರಮದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಸಂಸ್ಥೆಯ ನಿರ್ದೇಶಕಿ ಕರ್ನಾಟಕ ಕಲಾಶ್ರೀ, ನಾಟ್ಯಕಲಾಪ್ರಪೂರ್ಣೆ ಗುರು ಶ್ರೀಮತಿ ನಿರ್ಮಲ ಮಂಜುನಾಥ್‌ರವರ ಶಿಷ್ಯವೃಂದ ಇವರಿಂದ ಹಾಗೂ ನಮ್ಮ ಸಂಘದ ಹಲವು ಯುವ ಕಲಾವಿದೆಯರಾದ ಶ್ರೀಮತಿ ರಶ್ಮಿ, ಶರಣ್ಯ, ಅನಿಕ, ಅಮೂಲ್ಯ, ರಚನ, ಶ್ರೀಮತಿ ಸುಮಿತ ವಸಂತ್ ಹಾಗೂ ವಿಶೇಷ ಪಾತ್ರದಲ್ಲಿ ಬೇಬಿ ಆರುಹಿ ಶರಣ್ ಇವರು ವಿವಿಧ ನೃತ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು.

ವಿದ್ವಾನ್ ಯು. ಪಿ. ಶರಣ್ ಹಾಗೂ ವಿದುಷಿ ಶ್ರೀಮತಿ ನಿಶ್ವಿತಶರಣ್, ಕದ್ರಿ ನೃತ್ಯ ವಿದ್ಯಾನಿಲಯ ಚಾರಿಟೇಬಲ್ ಟ್ರಸ್ಟ್ (ರಿ.), ಮಂಗಳೂರು ಇವರಿಂದ 'ಯುಗಳ ನೃತ್ಯ' ಹಾಗೂ ವಿದ್ವಾನ್ ಪವನ್ ಮಧುಸೂಧನ್ ರಾವ್ ಹಾಗೂ ವಿದುಷಿ ಶ್ರೀಮತಿ ಡಾ। ಮನಾಲಿ ಪವನ್ ರಾವ್, ನೃತ್ಯ ವಿದ್ಯಾನಿಲಯ ಮುಂಬೈ ಈ ತಂಡಗಳಿಂದ ಆಯೋಜಿಸಿದ್ದ ಭರತನಾಟ್ಯ ಕಾರ್ಯಕ್ರಮವು ಅದ್ಭುತವಾಗಿ ಮೂಡಿಬಂತು. ನಂತರ ಸಂಸ್ಥೆಯ ನಿರ್ದೇಶಕಿ ಹಾಗೂ ಗುರು ಶ್ರೀಮತಿ ನಿರ್ಮಲ ಮಂಜುನಾಥ್ ಹಾಗೂ ಸಹಗುರು ವಿದುಷಿ ಶ್ರೀಮತಿ ಮದನಿಕ ಮಂಜುನಾಥ್ ಪವನ್, ಈ ತಾಯಿ-ಮಗಳ ಯುಗಳ ನೃತ್ಯ ಅರ್ಧನಾರೀಶ್ವರ ಸ್ತೋತ್ರವು ಸೇರಿದ ಸಭಿಕರ ಕಣ್ಮನ ಸೆಳೆಯಿತು.

ಅಂದಿನ ಸಭಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಕ್ಷೇತ್ರ ಧರ್ಮಸ್ಥಳದ ಸುರೇಂದ್ರ ಕುಮಾರ್ ಹೆಗಡೆ ಅವರ ಪತ್ನಿ ಶ್ರೀಮತಿ ಅನಿತಾ ಸುರೇಂದ್ರ ಕುಮಾರ್, ಕರ್ನಾಟಕ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಪ್ರದೀಪ್ ಕುಮಾರ್ ಪಂಜ, ನಿವೃತ್ತ ನ್ಯಾಯಾಧೀಶರಾದ ಶ್ರೀ ಸಂತೋಷ್ ಕುಮಾರ್ ಹೆಗಡೆ, ಶ್ರೀಮತಿ ಶಕುಂತಲಾ ರಮೇಶ್ ಇವರು ಕಾರ್ಯಕ್ರಮದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರು.

ಈ ಕಾರ್ಯಕ್ರಮಕ್ಕೆ ಬಂದ ಅತಿಥಿಗಳನ್ನು ಸಂಸ್ಥೆಯ ನಿರ್ದೇಶಕರಾದ ಶ್ರೀಮತಿ ನಿರ್ಮಲ ಮಂಜುನಾಥ್ ಅವರು ಸ್ವಾಗತಿಸಿದರು. ವಿದುಷಿ ಮದನಿಕ ವಂದನಾರ್ಪಣೆಯನ್ನು ಸಲ್ಲಿಸಿದರು. ಶ್ರೀಮತಿ ವೀಣಾ ಶರ್ಮ ಇವರು ಅಚ್ಚುಕಟ್ಟಾಗಿ ಕಾರ್ಯಕ್ರಮವನ್ನು ನಿರೂಪಿಸಿದರು.





## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಬಿಜೈ ರಸ್ತೆ, ಮಂಗಳೂರು





ಸಮಾಜ ಬಾಂಧವರೇ,

ದಿನಾಂಕ 06-04-2025ನೇ ರವಿವಾರ

**ಶ್ರೀ ಸಭಾದ ವತಿಯಿಂದ**

ಶ್ರೀ ಶ್ರೀ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ

**ವರ್ಧಂತ್ಯುತ್ಸವ ಹಾಗೂ ಶ್ರೀ ರಾಮನವಮಿ ಕಾರ್ಯಕ್ರಮಗಳನ್ನು**

ಶ್ರೀ ಸುಬ್ರಹ್ಮಣ್ಯ ಸಭಾಸದನದಲ್ಲಿ ಆಚರಿಸಲಾಗುವುದು.

ಆ ಪ್ರಯುಕ್ತ ಶ್ರೀರಾಮ ದೇವರಿಗೆ ಕಲ್ಪೋಕ್ತ ಪೂಜೆ ನಡೆಯಲಿದೆ.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಅಧ್ಯಕ್ಷರು ಹಾಗೂ ಸರ್ವ ಸದಸ್ಯರು

### ಕಾರ್ಯಕ್ರಮಗಳು

ಬೆಳಗ್ಗೆ ಗಂಟೆ 7-30 : ಪಾರಾಯಣ

ಬೆಳಗ್ಗೆ ಗಂಟೆ 8-30 : ಉಪಾಹಾರ

ಬೆಳಗ್ಗೆ ಗಂಟೆ 9-00 : ಶ್ರೀ ಶಾರದಾಂಬ ಭಜನಾ ಮಂಡಳಿ ಇವರಿಂದ ರಾಮ ರಕ್ಷಾ ಸ್ತೋತ್ರ, ಹನುಮ ಸ್ತೋತ್ರ ಸಹಿತ 'ಭಜನಾ ಕಾರ್ಯಕ್ರಮ'
ಗಾಯತ್ರೀ ಜಪ ಮತ್ತು ಹೋಮ





ಬೆಳಗ್ಗೆ ಗಂಟೆ 10-30 : ಶ್ರೀ ರಾಮದೇವರಿಗೆ ಕಲ್ಪೋಕ್ತ ಪೂಜೆ
ಶ್ರೀಗುರುಗಳ ಕುರಿತು ಪ್ರವಚನ

ಮಧ್ಯಾಹ್ನ ಗಂಟೆ 12-30 : ಪ್ರಸಾದ ಭೋಜನ

# ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ನೂತನ ಆಡಳಿತ ಮಂಡಳಿ



**ಡಾ। ಎ. ಪಿ. ಕೃಷ್ಣ,** ಅಧ್ಯಕ್ಷರು

ಕಾಸರಗೋಡಿನ ಪ್ರಸಿದ್ಧ ಸ್ಥಾನಿಕ ಮನೆತನಗಳಲ್ಲೊಂದಾದ ಅನಂತಪುರದ ಶ್ರೀಮತಿ ರಾಧಮ್ಮ ಮತ್ತು ಶ್ರೀ ಶಂಕರನಾರಾಯಣಯ್ಯ ಇವರ ಕೊನೆಯ ಪುತ್ರರಾಗಿರುತ್ತಾರೆ. ಇವರು M.Sc. ಹಾಗೂ Ph.D. ಪದವೀಧರರು. ಮಂಗಳೂರಿನಲ್ಲಿರುವ ಎ. ಬಿ. ಶೆಟ್ಟಿ ಮೆಮೋರಿಯಲ್ ಇನ್‌ಸ್ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸಸ್ ಹಾಗೂ ಕೆ. ಎಸ್. ಹೆಗ್ಡೆ ಮೆಡಿಕಲ್ ಅಕಾಡೆಮಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ ನಾಲ್ಕು ದಶಕಗಳ ಅಪಾರ ಅಧ್ಯಾಪನ ಅನುಭವ ಹಾಗೂ ನಿಟ್ಟೆ ವಿಶ್ವವಿದ್ಯಾಲಯದಲ್ಲಿ ಉಪಕುಲಪತಿ (ಪರೀಕ್ಷಾಂಗ)ಯಾಗಿ ಉನ್ನತ ವಿದ್ಯಾಭ್ಯಾಸ ರಂಗದಲ್ಲಿನ ಆಡಳಿತಾತ್ಮಕ ಅನುಭವ ಹೊಂದಿರುತ್ತಾರೆ. ಪ್ರಸ್ತುತ ತಿರುವನಂತಪುರದಲ್ಲಿರುವ ಪಿ.ಎಂ.ಎಸ್. ದಂತ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕ ಮತ್ತು ವಿಭಾಗ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದರ ಜೊತೆಗೆ ಮಂಗಳೂರಿನಲ್ಲಿರುವ ಯೋಗ ಮತ್ತು ನ್ಯಾಚುರೋಪತಿ ಕಾಲೇಜು, ಕೆಲವು ಫಿಸಿಯೋಥೆರಪಿ ಕಾಲೇಜು ಹಾಗೂ ನರ್ಸಿಂಗ್ ಕಾಲೇಜುಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸಾವಿರಾರು ವಿದ್ಯಾರ್ಥಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಉತ್ತಮ ಬಾಂಧವ್ಯವನ್ನು ಹೊಂದಿರುತ್ತಾರೆ. ಅಂತೆಯೇ ವೈದ್ಯಕೀಯ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ನಾಲ್ಕು ಪಠ್ಯಪುಸ್ತಕಗಳನ್ನು ಬರೆದಿರುತ್ತಾರೆ. ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇದರ ಕಾರ್ಯಕಾರಿ ಸಮಿತಿಯ ಉಪಾಧ್ಯಕ್ಷರಾಗಿ ಸುಮಾರು ಎರಡು ದಶಕಗಳಿಂದ ಸಮಾಜಸೇವಾ ನಿರತರಾಗಿರುತ್ತಾರೆ. ಸಭೆಯ ವಿದ್ಯಾಭ್ಯಾಸ ಸಮಿತಿಯ ಅಧ್ಯಕ್ಷರಾಗಿ ಸಭೆಯನ್ನು ಸ್ಥಾಪಿಸಿದ ಹಿರಿಯರ ಆಶೋತ್ತರಗಳಲ್ಲಿ ಒಂದಾದ ಸಮಾಜದ ಬಡಮಕ್ಕಳ ವಿದ್ಯಾಭ್ಯಾಸದ ಪ್ರಗತಿಗಾಗಿ ಹಲವಾರು ವರುಷಗಳಿಂದ ನಿರಂತರ ಪ್ರಯತ್ನಿಸುತ್ತಿದ್ದಾರೆ. ಪ್ರಸ್ತುತ ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇದರ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿ ಇನ್ನಷ್ಟು ಸಮಾಜಮುಖೀ ಕೆಲಸಗಳಲ್ಲಿ ತೊಡಗಿಸಿಕೊಳ್ಳುವ ಇಚ್ಛೆಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

---



**ಶ್ರೀಮತಿ ಸುಮಂಗಲಾ ಪ್ರಭಾಕರ್,** ಉಪಾಧ್ಯಕ್ಷರು

ದಿ। ಪಿ. ಎಸ್. ಪ್ರಭಾಕರ್‌ರವರ ಪತ್ನಿಯಾಗಿದ್ದು ಹಲವಾರು ವರ್ಷಗಳಿಂದ ಸದನದ ನಿರ್ದೇಶಕಿಯಾಗಿ ಸೇವೆ ಸಲ್ಲಿಸಿದ್ದು, ಈಗ ಎರಡನೇ ಬಾರಿಗೆ ಸಭಾದ ಉಪಾಧ್ಯಕ್ಷೆಯಾಗಿ ಆಯ್ಕೆಯಾಗಿರುವರು. ಶ್ರೀ ಸುಬ್ರಹ್ಮಣ್ಯ ಸಭಾದ ವಜ್ರಮಹೋತ್ಸವ ಸಮಯದಲ್ಲಿ ಮಹಿಳಾ ವೇದಿಕೆಯ ಕೋಶಾಧಿಕಾರಿಯಾಗಿ ಕಾರ್ಯ ನಿರ್ವಹಿಸಿರುತ್ತಾರೆ. ಲಯನ್ಸ್ ಕ್ಲಬ್ ಮಂಗಳೂರಿನ ಸದಸ್ಯೆಯಾಗಿ 45 ವರ್ಷಗಳ ಒಡನಾಟ ಹೊಂದಿದ್ದು ಸದಸ್ಯೆಯಾಗಿ, ಕಾರ್ಯದರ್ಶಿ, ಕೋಶಾಧಿಕಾರಿ, ಜಿಲ್ಲಾಧ್ಯಕ್ಷೆಯಾಗಿ, ಲಯನೆಸ್ ಜಿಲ್ಲೆಯಲ್ಲಿ ಉನ್ನತ ಹುದ್ದೆಯಾದ 'ಡಿಸ್ಟ್ರಿಕ್ಟ್ ಲಯನೆಸ್ ಪ್ರೆಸಿಡೆಂಟ್' ಪದವಿ ಪಡೆದಿರುವರು. ಹಾಸನ, ದಕ್ಷಿಣ ಕನ್ನಡ, ಕೊಡಗು ಮುಂತಾದ ಜಿಲ್ಲೆಗಳನ್ನೊಳಗೊಂಡ ಲಯನ್ಸ್ ಜಿಲ್ಲೆ 317–Dಯ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ 'Lioness of the Year' ಮುಂತಾದ ಪ್ರಶಸ್ತಿಗಳನ್ನು ಪಡೆದಿರುವರು. ಸುಬ್ರಹ್ಮಣ್ಯ ಸದನದ ಶತಮಾನೋತ್ಸವ ಸಂಭ್ರಮದ ಸಮಯದಲ್ಲಿ ಜತೆ ಕಾರ್ಯದರ್ಶಿಯಾಗಿದ್ದರು. ಇತ್ತೀಚೆಗೆ ಶ್ರೀ ಸುಬ್ರಹ್ಮಣ್ಯ ಸಭಾದ ಅಂಗಸಂಸ್ಥೆಯಾದ 'ಶಿವಸದನ ಚಾರಿಟೇಬಲ್ ಟ್ರಸ್ಟ್'ನ ಅಧ್ಯಕ್ಷೆಯಾಗಿ ಆಯ್ಕೆಯಾಗಿರುತ್ತಾರೆ.

---



**ಇನ್ನಾ ಚಂದ್ರಕಾಂತ ರಾವ್,** ಉಪಾಧ್ಯಕ್ಷರು

ಬಿ.ಟೆಕ್. (ಮೆಕ್ಯಾನಿಕಲ್) ಪದವೀಧರರಾಗಿದ್ದು ಬಳಿಕ ಪೋಸ್ಟ್ ಗ್ರಾಜುಯೇಟ್ ಪ್ರೋಗ್ರಾಂ ಇನ್ ಇಂಟರ್‌ನ್ಯಾಷನಲ್ ಮ್ಯಾನೇಜ್‌ಮೆಂಟ್‌ನಲ್ಲಿ ಪದವಿ ಪಡೆದು ಮೆಟಲ್ ಇಂಡಸ್ಟ್ರಿಗೆ ಸಂಬಂಧಿಸಿದ ಕಂಪೆನಿಗಳಲ್ಲಿ ತಮ್ಮ ವೃತ್ತಿಜೀವನ ಪ್ರಾರಂಭಿಸಿ ನಂತರ ಹಲವಾರು ಪ್ರತಿಷ್ಠಿತ ಕಂಪೆನಿಗಳಲ್ಲಿ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ. ಇವುಗಳಲ್ಲಿ ಪ್ರಮುಖವಾದವುಗಳು –

❖ CEO & Whole time director of Jindal Poly Films Ltd. ❖ President & Director of Swiss Singapore Overseas PTE. ❖ SBU Head & Sr. Vice President (Marketing - Flat Rolled Products) in Hindalco Industries Limited. ❖ General Manager & Asst. Vice President of Global Marketing Cell in Adithya Birla Group.

ಅದ್ವೈತ ಭಾರತೀಯ ಸಮುದಾಯ ಅಭಿವೃದ್ಧಿ ಮತ್ತು ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಇವರು ತಮ್ಮ ಊರಿನಲ್ಲಿ ಪ್ರಗತಿಪರ ಕೃಷಿಕರಾಗಿ ಹಲವರಿಗೆ ಮಾರ್ಗದರ್ಶಿಯಾಗಿದ್ದು, ಉಡುಪಿ ಜಿಲ್ಲೆಯ 'ಶ್ರೇಷ್ಠ ಕೃಷಿಕ 2023' ಪ್ರಶಸ್ತಿ ವಿಜೇತರಾಗಿದ್ದು ತಮ್ಮದೇ ಇನ್ನಾ ಹೆರಿಟೇಜ್ ಹೋಮ್ ಟ್ರಸ್ಟ್‌ನ ಅಧ್ಯಕ್ಷರಾಗಿ ಹಲವಾರು ಸಮಾಜಮುಖೀ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಪ್ರಸ್ತುತ ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದು ತಮ್ಮ ಅಪಾರ ಅನುಭವಗಳ ಮೂಲಕ ಸಂಘದ ಬೆಳವಣಿಗೆಗೆ ಕಾರ್ಯತತ್ಪರರಾಗಿ ಕೈಜೋಡಿಸಿರುತ್ತಾರೆ.

---



**ಪಿ. ಉದಯಕುಮಾರ್ ರಾವ್,** ಕಾರ್ಯದರ್ಶಿ

ಬಿ.ಕಾಂ. ಪದವೀಧರರಾಗಿದ್ದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಅಧಿಕಾರಿಯಾಗಿ 37 ವರ್ಷ ಸೇವೆ ಸಲ್ಲಿಸಿ ನಿವೃತ್ತಿಯ ನಂತರ ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಐದು ವರ್ಷ ಕಾರ್ಯನಿರ್ವಹಿಸಿರುತ್ತಾರೆ. ಈಗ ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಹಲವಾರು ವರ್ಷಗಳಿಂದ ನಿರ್ದೇಶಕರಾಗಿದ್ದು ಈಗ ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವ ಜವಾಬ್ದಾರಿ ಹೊತ್ತಿರುತ್ತಾರೆ.

---



**ಶ್ರೀ ಪಿ. ಶ್ರೀಕಾಂತ್ ರಾವ್,** ಕೋಶಾಧಿಕಾರಿ

ಶ್ರೀ ಸುಬ್ರಹ್ಮಣ್ಯ ಸಭಾದ ಕೋಶಾಧಿಕಾರಿಯಾಗಿ 3ನೇ ಅವಧಿಗೆ ಆಯ್ಕೆಯಾಗಿರುವ ಶ್ರೀ ಪಿ. ಶ್ರೀಕಾಂತ್ ರಾವ್ ಇವರು ವೃತ್ತಿಯಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿದ್ದರೂ ಪ್ರವೃತ್ತಿಯಲ್ಲಿ ಹಲವು ಸಾಮಾಜಿಕ, ಧಾರ್ಮಿಕ, ರಾಜಕೀಯ ಸಂಘ–ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಮಾಜಸೇವೆಯಲ್ಲಿ ನಿರತರಾಗಿದ್ದಾರೆ. ಶ್ರೀ ಸಭಾದ ಯುವವೇದಿಕೆಯಲ್ಲಿ 2 ಅವಧಿಗೆ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಇವರು ಪ್ರಸ್ತುತ ಶ್ರೀ ಸಭಾದ ಮಾಸಪತ್ರಿಕೆಯಾದ 'ಜ್ಞಾನಶಕ್ತಿ'ಗೆ ಸಂಪಾದಕರಾಗಿ ಹಾಗೂ ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ ಹಾಲಿ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.


---



**ಚೇತನ್ ಶರ್ಮಾ,** ಜತೆ ಕಾರ್ಯದರ್ಶಿ

ಮಂಗಳೂರಿನ ದಿ। ಕೆ. ರಘುರಾಮ ಶರ್ಮರ ಪುತ್ರರಾಗಿದ್ದು ಮಂಗಳೂರಿನಲ್ಲಿ ಸ್ವಂತ ಬಿಸಿನೆಸ್ ನಡೆಸುತ್ತಿದ್ದಾರೆ. ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 10 ವರ್ಷಗಳಿಂದ ನಿರ್ದೇಶಕರಾಗಿದ್ದು ಸಂಘದ ವಿವಾಹ ವೇದಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದು ತಮ್ಮ ಸೇವೆ ಸಲ್ಲಿಸುತ್ತಿದ್ದಾರೆ.

ಈಗ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಜತೆ ಕಾರ್ಯದರ್ಶಿಯಾಗಿ ಆಯ್ಕೆಗೊಂಡಿರುತ್ತಾರೆ.




**ಸಂತೋಷ್ ಕುಮಾರ್ ಉಜ್ಜೋಡಿ,** ಜತೆ ಕಾರ್ಯದರ್ಶಿ

ಉಜ್ಜೋಡಿ ಮನೆತನದ ಕೀರ್ತಿಶೇಷ ರಾಮ ರಾವ್ ಮತ್ತು ಇಂದಿರಾ ಇವರ ಪುತ್ರರಾದ ಶ್ರೀ ಸಂತೋಷ್ ಕುಮಾರ್ ಉಜ್ಜೋಡಿಯವರು ಆಟೋಮೊಬೈಲ್ ಡಿಪ್ಲೋಮಾ ಪದವೀಧರರಾಗಿದ್ದು 25 ವರ್ಷಗಳ ಅನುಭವದೊಂದಿಗೆ ತಮ್ಮದೇ ಆದ ರಾಮ ಆಟೋಮೊಬೈಲ್‌ನ ಮ್ಹಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶ್ರೀ ಸುಬ್ರಹ್ಮಣ್ಯ ಸಭಾದೊಂದಿಗೆ ಹತ್ತಾರು ವರ್ಷಗಳಿಂದ ನಿರಂತರ ಒಡನಾಟ ಹೊಂದಿರುವುದಲ್ಲದೆ ತಮ್ಮ ವೃತ್ತಿ ಅನುಭವಗಳ ಮೂಲಕ ಸಂಘದ ಹಲವಾರು ಕೆಲಸ–ಕಾರ್ಯಗಳಲ್ಲಿ ಸಲಹೆಗಾರರಾಗಿರುತ್ತಾರೆ. ಸಂಘದ ನಿರ್ದೇಶಕರಾಗಿ ಕೆಲಸ ಮಾಡಿದ ಇವರು ಈಗ ಶ್ರೀ ಸುಬ್ರಹ್ಮಣ್ಯ ಸಭಾದ ಜತೆ ಕಾರ್ಯದರ್ಶಿಯಾಗಿ ಆಯ್ಕೆಯಾಗಿ ತಮ್ಮ ಸೇವೆ ಸಲ್ಲಿಸಲು ಜೊತೆಗೂಡಿರುತ್ತಾರೆ.

**ಸಂಪಾದಕ ಮಂಡಳಿ :** ❖ ಪ್ರಧಾನ ಸಂಪಾದಕರು : ಎಂ. ಎಸ್. ರಘುನಾಥ ರಾವ್ ಪುತ್ತೂರು - 9448481696 ❖ ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618
ಸಂಪಾದಕ ಮಂಡಳಿ : ● ನಾಗರಾಜ್ ವರ್ಕಾಡಿ ● ರಘುವೀರ್ ಪೆರ್ಡೂರು ● ಟಿ. ಬಿ. ಮೋಹನ್ ರಾವ್ ● ಸ್ವಾತಿ ಪ್ರಮೋದ್ ಕ್ಯಾದಿಗೆ ❖ ಆರ್ಥಿಕ ಸಲಹಾ ಸಮಿತಿ : ● ಉದಯ ಕುಮಾರ್ ಪಿ. ● ಸಂತೋಷ್ ಕುಮಾರ್ ಯು. ● ಅನಿಲ್ ರಾವ್ ಬಿ. ಎಸ್. ❖ ಗೌರವ ಸಲಹೆಗಾರರು : ● ಚೇತನ್ ಶರ್ಮ ● ಶ್ರೀಮತಿ ಅರುಣಾ ಸೋಮಶೇಖರ್ ❖ ಪ್ರಕಾಶಕರು : ಡಾ. ಎ. ಪಿ. ಕೃಷ್ಣ

## ರಾಜ್ಯಮಟ್ಟದ ಚುಟುಕು ಕೃತಿಗಳ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಕೃತಿ



ಬೆಳಗಾವಿ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಬೆಳ್ಳಿಹಬ್ಬ ಹಾಗೂ ಜಿಲ್ಲಾ ಸಮ್ಮೇಳನದ ಅಂಗವಾಗಿ ನಡೆದ ರಾಜ್ಯಮಟ್ಟದ ಚುಟುಕು ಕೃತಿಗಳ ಸ್ಪರ್ಧೆಯಲ್ಲಿ ಶ್ರೀ ಕೃಷ್ಣಯ್ಯ ಅನಂತಪುರ, ಕಣ್ಣೂರು, ಕಾಸರಗೋಡು ಜಿಲ್ಲೆ ಅವರ 'ಎದೆ ಬಿಗಿದ ಕ್ಷಣಗಳು' ಕೃತಿ ಪ್ರಥಮ ಸ್ಥಾನ ಗಳಿಸಿದೆ. ಹಿರಿಯ ಸಾಹಿತಿ, ವಿಮರ್ಶಕ, ನಿವೃತ್ತ ಪ್ರಾಧ್ಯಾಪಕ, ಡಾ. ಪಿ. ಜಿ. ಕೆಂಪಣ್ಣವರ ಅವರು ಕೃತಿಗಳ ಮೌಲ್ಯಮಾಪಕರಾಗಿ ಕಾರ್ಯನಿರ್ವಹಿಸಿದ್ದು, ಇದೇ ಮಾರ್ಚ್ 2 ರವಿವಾರ ಬೆಳಗಾವಿಯ ಮಹಾಂತೇಶ ನಗರದ 'ಮಹಾಂತ ಭವನ'ದಲ್ಲಿ ಜರುಗುವ 4ನೆಯ ಜಿಲ್ಲಾ ಚುಟುಕು ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಬಹುಮಾನ ವಿತರಿಸಲಾಗುವುದು. ಸ್ಪರ್ಧೆಗಾಗಿ ಒಟ್ಟು 45 ಕೃತಿಗಳು ಬಂದಿದ್ದವು ಮತ್ತು ಕೊನೆ ಹಂತದಲ್ಲಿ ಹದಿನಾರು ಕೃತಿಗಳು ಪರಿಶೀಲಿಸಲಾಗಿತ್ತು.

---



ಕೇಂದ್ರ ಸರಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ನಡೆಸಿರುವ (Indian Institute of Corporate Affairs) ಪರೀಕ್ಷೆಯಲ್ಲಿ ಶ್ರೀ **ಉದಯಶಂಕರ ರಾವ್** ಇವರು ಅತ್ಯುತ್ತಮ ಅಂಕಗಳಿಂದ ತೇರ್ಗಡೆಯಾಗಿರುತ್ತಾರೆ. ಈ ಮೂಲಕ ಕಾರ್ಪೊರೇಟ್ ಕಂಪೆನಿಗಳ ಸ್ವತಂತ್ರ ನಿರ್ದೇಶಕ (ಇಂಡಿಪೆಂಡೆಂಟ್ ಡೈರೆಕ್ಟರ್)ರಾಗುವ ಅರ್ಹತೆಯನ್ನು ಪಡೆದುಕೊಂಡಿರುತ್ತಾರೆ. ಇವರು ಸಿವಿಲ್ ಇಂಜಿನಿಯರಿಂಗ್ ತಾಂತ್ರಿಕ ಶಿಕ್ಷಣ ಮುಗಿಸಿ ಅನಂತರ ಇಂಟರ್‌ನ್ಯಾಷನಲ್ ಬಿಜಿನೆಸ್ ಮ್ಯಾನೇಜ್‌ಮೆಂಟ್‌ನಲ್ಲಿ ಎಂ.ಬಿ.ಎ. ಪದವಿ ಪಡೆದಿರುವ ಇವರು ಗುಜರಾತಿನ ಬರೋಡ, ಅಹ್ಮದಾಬಾದ್ ಹಾಗೂ ಮುಂಬೈ, ಹೈದರಾಬಾದ್‌ನ ಪ್ರತಿಷ್ಠಿತ ಕಂಪೆನಿಗಳು, ಮಲ್ಟಿನ್ಯಾಶನಲ್ ಕಂಪೆನಿಗಳಲ್ಲಿ ಉನ್ನತ ಹುದ್ದೆಯನ್ನು ಅಲಂಕರಿಸಿ ಕಾರ್ಯ ನಿರ್ವಹಿಸಿರುತ್ತಾರೆ. ಶ್ರೀ ಉದಯಶಂಕರ ರಾವ್ ಇವರು ನಾರಾವಿ ಹೊಳೆಹೊದ್ದು 'ಶ್ರೀ ಲಕ್ಷ್ಮೀನಿವಾಸ'ದ ದಿ। ಗೋವಿಂದರಾವ್ ಮತ್ತು ಲಕ್ಷ್ಮಿಯಮ್ಮ ದಂಪತಿಗಳ ದ್ವಿತೀಯ ಸುಪುತ್ರ.

---

## ಶ್ರೀಮತಿ ಅಹಲ್ಯಾ ಉಮೇಶ್ ರಾವ್ ಪರಾರಿ ಇವರ 80ರ ಹುಟ್ಟುಹಬ್ಬದ ಸಂಭ್ರಮಾಚರಣೆ




ಶಿವಸದನದಲ್ಲಿ ನಗುಮೊಗದ **ಶ್ರೀಮತಿ ಅಹಲ್ಯಾ ಉಮೇಶ್ ರಾವ್** ಪರಾರಿ ಇವರ 80ನೆಯ ಹುಟ್ಟುಹಬ್ಬ ಆಚರಿಸಲಾಯಿತು. ಮೊದಲಿಗೆ ಅವರ ಕಿರುಪರಿಚಯವನ್ನು ಮಾಡಿಸಿ ಶೃಂಗೇರಿ ಗುರುಗಳ ಹಾಗೂ ಶಾರದಾಂಬೆಯನ್ನು, ಆಗಮಿಸಿದ ಪುತ್ತೂರು ಬಂಧುಗಳು, ಶಿವಸದನ ಚಾರಿಟೇಬಲ್ ಟ್ರಸ್ಟ್‌ನ ಸದಸ್ಯರು ಸ್ತುತಿಸಿದರು.

ವಿಶೇಷಚೇತನ ಶಾಲೆಯ ಮಕ್ಕಳು ಶಿಕ್ಷಕಿಯರು ಹಾಡು ಹಾಡಿ ಅವರು ಕೂಡ ಈ ಸಂಭ್ರಮದಲ್ಲಿ ಪಾಲ್ಗೊಂಡರು. ಹಿರಿಯ ನಾಗರಿಕರಿಗೆ ವಿವಿಧ ಆಟಗಳನ್ನು ಆಡಿಸಲಾಯಿತು. ಪ್ರಾಯೋಜಕರ ಮಕ್ಕಳು, ಸಹೋದರಿಯರು, ನಾದಿನಿಯಂದಿರು ಆರತಿ ಹಾಡು ಹಾಡಿ ಆರತಿ ಬೆಳಗಿದರು. ವೇದಮೂರ್ತಿ ಸೂರ್ಯನಾರಾಯಣ ಭಟ್ ಆಗಮಿಸಿ ಮಂತ್ರಪಠಣ ಮಾಡಿ ಅವರ ಬಗ್ಗೆ ಅಭಿಮಾನ ವ್ಯಕ್ತಪಡಿಸಿ ಶುಭಹಾರೈಸಿದರು.

ಶ್ರೀ ಶ್ರೀಪತಿ ರಾವ್ ತಾನೇ ಸ್ವತಃ ತಯಾರಿಸಿದ ಸಿಹಿಯಾದ ರವಾ ಸೀರಾವನ್ನು ತುಂಡರಿಸಿದಾಗ, ಅಳಿಯಂದಿರು, ಮಕ್ಕಳು ಸಹಕರಿಸಿ ಎಲ್ಲರೂ ಹುಟ್ಟುಹಬ್ಬದ ಹಾಡು ಹಾಡಿದರು. ಅಹಲ್ಯಕ್ಕ ಶುಭಮಂತ್ರಾಕ್ಷತೆ ಹಾಕಿದಾಗ ಎಲ್ಲರೂ ಆಶೀರ್ವಾದ ಪಡೆದರು. ಅವರು ಹುಟ್ಟುಹಬ್ಬ ಆಚರಣೆ ಬಗ್ಗೆ ಭಾವುಕರಾಗಿ ತನ್ನ ಭಾವನೆ ವ್ಯಕ್ತಪಡಿಸಿದರು. ಶಿವಸದನದ ಟ್ರಸ್ಟ್‌ನ ಕೋಶಾಧಿಕಾರಿ ಶ್ರೀ ದಿನಕರ್ ರಾವ್ ಆಗಮಿಸಿದ ಪ್ರತಿಯೊಬ್ಬರಿಗೂ ಪ್ರೀತಿಯ ಧನ್ಯವಾದ ಅರ್ಪಿಸಿದರು. ಕಾರ್ಯಕ್ರಮ ಪ್ರಯುಕ್ತ ಎಲ್ಲರಿಗೂ ವಿಶೇಷ ಭೋಜನ ಏರ್ಪಡಿಸಿದ್ದರು. ಪ್ರತಿಯೊಬ್ಬರೂ ಭೋಜನ ಬಡಿಸುವಲ್ಲಿ ಸಹಕರಿಸಿದರು.

*ವರದಿ : **ಶ್ರೀಮತಿ ಸುಮಂಗಲಾ ಪ್ರಭಾಕರ್***

---


## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)

**'ಶ್ರೀ ಕುಡ್ವಿ ಪದ್ಮನಾಭಯ್ಯ ಗಾರ್ಡನ್ಸ್' ಬಿಜೈ ರಸ್ತೆ, ಮಂಗಳೂರು - 575 003**

**ಶಾಖೆಗಳು** ✆ : **9880968032 / 0824-2982095**

| | |
|---|---|
| ಮಂಗಳೂರು | ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ ✆ : 0824 - 2491895 / 8861155454 |
| ಪುತ್ತೂರು | ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ ✆ : 08251 - 235895 / 8123659955 |
| ಬೆಳ್ತಂಗಡಿ | 'ಬೃಂದಾವನ', ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು) ✆ : 08256 - 234076 / 8867269944 |
| ಸುರತ್ಕಲ್ | 'ಪೂವ ಆರ್ಕೆಡ್' ✆ : 0824 - 2477895 / 9611550803 |
| ಕಾರ್ಕಳ | 'ಶ್ರೀ ಶಂಕರ', ಪ್ರಸಾದ್ ಭವನ ಕಂಪೌಂಡು ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್ ✆ : 08258 - 235544 / 9980528800 |
| ಸುಳ್ಯ | ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು ✆ : 08257 - 233895 / 8147539955 |
| ಬಿ.ಸಿ. ರೋಡ್ | ಲಕ್ಷ್ಮೀ ಮಹಲ್ ✆ : 08255 - 233895 / 8792464344 |
| ವಿಟ್ಲ | ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ ✆ : 08255 - 239895 / 8147469955 |
| ಮೂಡಬಿದ್ರೆ | ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ ✆ : 08258 - 200161 / 8147549955 |
| ಪದವಿನಂಗಡಿ | ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ ✆ : 9731405917 |
| ಕುತ್ತಾರ್ | ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ ✆ : 8792034344 |
| ಕಿನ್ನಿಗೋಳಿ | ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ ✆ : 8197677575 |
| ಪಡೀಲ್ ಪುತ್ತೂರು | ವಿಜಯಲಕ್ಷ್ಮೀ ಕಾಂಪ್ಲೆಕ್ಸ್ ✆ : 9740775967 |
| ಕೊಕ್ರಾಡಿ | ವೃದ್ಧಿ ಕಾಂಪ್ಲೆಕ್ಸ್, ಜಂತಿಗೋಳಿ ಕ್ರಾಸ್, ಬೆಳ್ತಂಗಡಿ ✆ : 9741443470 |
| ಕುಂಜತ್‌ಬೈಲ್ | ನಮ್ರದೀಪ್ ಕಾಂಪ್ಲೆಕ್ಸ್, ಕೋಸ್ಟಲ್ ಗಾರ್ಡ್ ಎದುರು ✆ : 9740925733 |
| ಕೋಡಿಕ್ಕಲ್ | ಸುಗಂಧಿ ಪರ್ಲ್ಸ್, ಮೈನ್ ರೋಡ್, 7th ಕ್ರಾಸ್, ಮಂಗಳೂರು ✆ : 9945916755 |

**ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು**

| ನಿರಖು ಠೇವಣಿ (F.D.) | |
|---|---|
| 45 ದಿನಗಳಿಂದ 180 ದಿನಗಳ ವರೆಗೆ | - 5% |
| 181 ದಿನಗಳಿಂದ 364 ದಿನಗಳ ವರೆಗೆ | - 6% |
| 1 ವರ್ಷದಿಂದ 3 ವರ್ಷದ ವರೆಗೆ | - 8% |
| 3 ವರ್ಷಕ್ಕಿಂತ ಮೇಲ್ಪಟ್ಟು | - 9% |
| ಹಿರಿಯ ನಾಗರಿಕರಿಗೆ, ಸಂಘ-ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ | |

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**ಹೂಡಿಕೆಗಳು ದ್ವಿಗುಣಗೊಳ್ಳುವ ವಿಶೇಷ ನಿರಖು ಠೇವಣಿ ಯೋಜನೆ**

ಕನಿಷ್ಠ ಠೇವಣಿ : ರೂ. **10,000/-** ಠೇವಣಿ ಅವಧಿ : **88** ತಿಂಗಳು

ವಿಶೇಷ ಬಡ್ಡಿದರ : **9.6%**


---


ಪತ್ರಿಕೆಗೆ ಶುಭ ಬಯಸುವ–

**ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು**
**ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ**
**ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ**


---


ಪತ್ರಿಕೆಗೆ ಶುಭ ಬಯಸುವ –


**ಇನ್ನ ಶ್ರೀನಿವಾಸ ರಾವ್** ಹಾಗೂ
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**

ಶ್ರೀ ಗಣೇಶ ಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013

# ಕಾರ್ಮಾರು ಶ್ರೀ ಮಹಾವಿಷ್ಣು ದೇವಸ್ಥಾನದಲ್ಲಿ ಕರ್ನಾಟಕ ಸಂಗೀತ ಕಾರ್ಯಕ್ರಮ



ಶ್ರೀ ಮಹಾವಿಷ್ಣು ದೇವಸ್ಥಾನ ಕಾರ್ಮಾರು, ಮಾನ್ಯ ಇದರ ಬ್ರಹ್ಮಕಲಶೋತ್ಸವದ ಸಂದರ್ಭದಲ್ಲಿ ಕಾಸರಗೋಡಿನ ವಿದುಷಿ ರಾಧಾಮುರಳೀಧರ ಮತ್ತು ಶ್ರೀಮತಿ ಶ್ವೇತಾ ನಾಗೇಶ್ ಚೆನ್ನೈ ಇವರು ಕರ್ನಾಟಕ ಸಂಗೀತಕಾರ್ಯಕ್ರಮವನ್ನು ನಡೆಸಿಕೊಟ್ಟರು. ಇವರಿಗೆ ಪಕ್ಕವಾದ್ಯದಲ್ಲಿ, ವಯಲಿನ್‌ನಲ್ಲಿ ಶ್ರೀ ಜಗದೀಶ ಕೊರೆಕ್ಕಾನ ಹಾಗೂ ಮೃದಂಗದಲ್ಲಿ ಶ್ರೀ ಶ್ರೀಧರ ರೈ ಸಹಕರಿಸಿದರು.




ಶ್ರೀ ಯು. ಆರ್. ರಾಘವೇಂದ್ರ ರಾವ್ ಹಾಗೂ ಶ್ರೀಮತಿ ಸುಮಾ ಇವರ ಪುತ್ರಿ **ಚಿ। ಸೌ। ಸುರೇಖಾ** ಮತ್ತು ಶ್ರೀ ಎ. ಕೇಶವ ಶಾನುಭೋಗ ಹಾಗೂ ಶ್ರೀಮತಿ ಪುಷ್ಪಾ ಇವರ ಪುತ್ರ **ಚಿ। ಗೀತೇಶ್** ಇವರ ವಿವಾಹವು ತಾ. 2–3–2025 ರವಿವಾರ ಕೋಟೇಶ್ವರ 'ಎಸ್.ಕೆ.ಎಸ್.ಬಿ. ಕಲ್ಯಾಣ ಮಂಟಪ'ದಲ್ಲಿ ನಡೆಯಿತು.

❊ ❊ ❊

ಡಾ। ಬಿ. ಎಸ್. ಸತೀಶ್ ರಾವ್ ಮತ್ತು ಶ್ರೀಮತಿ ಜಯಂತಿ ಇವರ ಪುತ್ರ **ಚಿ। ಸ್ಮಿತೇಶ್** ಹಾಗೂ ಶ್ರೀ ಎನ್. ಲಕ್ಷ್ಮೀಪ್ರಸಾದ್ ಮತ್ತು ಶ್ರೀಮತಿ ಶಾಂತಿ ಇವರ ಪುತ್ರಿ **ಚಿ। ಸೌ। ನಿಧಿ** ಇವರ ವಿವಾಹವು ತಾರೀಕು 2–03–2025ನೇ ರವಿವಾರ ಉಡುಪಿಯ 'ಶಾರದಾ ಕಲ್ಯಾಣ ಮಂಟಪ'ದಲ್ಲಿ ನಡೆಯಿತು.

❊ ❊ ❊

ಆಳುಗ್ಗೇಲು ಶ್ರೀ ಸತೀಶ್ ರಾವ್ ಮತ್ತು ಶ್ರೀಮತಿ ಚೈತ್ರ ಇವರ ಪುತ್ರಿ **ಚಿ। ಸೌ। ಸಿಂಚನ** ಹಾಗೂ ಕಾಳವರ ಶ್ರೀ ಸುಬ್ರಹ್ಮಣ್ಯಂ ಮತ್ತು ಶ್ರೀಮತಿ ಶಾಂತಲಾ ಇವರ ಪುತ್ರ **ಚಿ। ಶಶಾಂಕ್** ಇವರ ವಿವಾಹವು ತಾ. 3–03–2025ನೇ ಸೋಮವಾರ ಉಡುಪಿಯ 'ಶ್ರೀದೇವಿ ಕಲ್ಯಾಣ ಮಂಟಪ'ದಲ್ಲಿ ನಡೆಯಿತು.

❊ ❊ ❊

ಶ್ರೀ ಎಂ. ಕೆ. ನಾರಾಯಣ ರಾವ್ ಮತ್ತು ದಿ। ಸುವರ್ಣಲತಾ ಇವರ ಪುತ್ರ **ಚಿ। ಸುದರ್ಶನ್** ಹಾಗೂ ಶ್ರೀ ಮೋಹನ್ ನಾವುಡ ಹಾಗೂ ಶ್ರೀಮತಿ ಗೀತಾ ಇವರ ಪುತ್ರಿ **ಚಿ। ಸೌ। ಮೇಘ** ಇವರ ವಿವಾಹವು ತಾ. 17–2–2025ನೇ ಸೋಮವಾರ ಬೆಳ್ತಂಗಡಿ ಧರ್ಮಸ್ಥಳ 'ಮಂಜುನಾಥ ಸ್ವಾಮಿ ಕಲಾಭವನ'ದಲ್ಲಿ ನಡೆಯಿತು.

❊ ❊ ❊

ಶ್ರೀ ರಾಜೇಶ್ ಆರ್. ಬಪ್ಪನಾಡು ಮತ್ತು ಶ್ರೀಮತಿ ಸ್ಮಿತಾ ಇವರ ಪುತ್ರಿ **ಚಿ। ಸೌ। ಕೃತಿ** ಹಾಗೂ ಡಾ. ಆನಂದ್ ಉತ್ತುರ್ ಮತ್ತು ಡಾ. ಅಲ್ಪನಾ ಇವರ ಪುತ್ರ **ಡಾ. ಅಕ್ಷಯ್ ಆನಂದ್** ಇವರ ವಿವಾಹವು ತಾ. 17–03–2025ನೇ ಸೋಮವಾರ ಬೆಂಗಳೂರಿನ 'ಬಾಲನ್ ಫಾರ್ಮ್ ಕನ್ವೆನ್ಷನ್ ಸೆಂಟರ್'ನಲ್ಲಿ ನಡೆಯಿತು.

# ಅಳಿದ ನಮ್ಮನೆ... ಇಲ್ಲಿರುವುದು ಸುಮ್ಮನೆ...



**ಶ್ರೀಮತಿ ರತ್ನಮಾಲಾ ಶಾನುಭೋಗ** (88) ತಾ. 4–3–2025ನೇ ಮಂಗಳವಾರ ಮಹಾರಾಷ್ಟ್ರದ ಅಹ್ಮದ್‌ನಗರದಲ್ಲಿ ನಿಧನರಾದರು. ಅವರು ಐವರು ಪುತ್ರಿಯರು ಮತ್ತು ಓರ್ವ ಪುತ್ರನನ್ನು ಅಗಲಿದ್ದಾರೆ.

❊ ❊ ❊



**ಶ್ರೀ ಅಮರದೀಪ ಜೆ. ರಾವ್** (48) ತಾ. 6–3–2025ನೇ ಗುರುವಾರ ನಿಧನರಾದರು.

❊ ❊ ❊



**ಶ್ರೀ ಅಲೆವೂರು ರಮೇಶ್ ರಾವ್** (81) ತಾ. 10–3–2025ನೇ ಸೋಮವಾರ ಬೆಂಗಳೂರಿನಲ್ಲಿ ನಿಧನರಾದರು. ಅವರು ಓರ್ವ ಪುತ್ರನನ್ನು ಅಗಲಿದ್ದಾರೆ.

❊ ❊ ❊



**ಶ್ರೀ ರಾಮನಾರಾಯಣ ಶಾನುಭೋಗ** (91) ತಾ. 8–3–2025ನೇ ಶನಿವಾರ ಬೆಂಗಳೂರಿನಲ್ಲಿ ನಿಧನರಾದರು. ಅವರು ಓರ್ವ ಪುತ್ರನನ್ನು ಅಗಲಿದ್ದಾರೆ.

❊ ❊ ❊



**ಶ್ರೀ ಸೀತಾರಾಮ ರಾವ್ ಕಂಗುಳಿ** (82) ತಾ. 16–3–2025ನೇ ರವಿವಾರ ನಿಧನರಾದರು. ಅವರು ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

❊ ❊ ❊



ಬಡಗುಬೆಟ್ಟು ಪರ್ಕಳ **ಶ್ರೀಮತಿ ಎಂ. ಕೆ. ವತ್ಸಲಾ** (66) ತಾರೀಕು 18–3–2025ನೇ ಮಂಗಳವಾರ ಮಣಿಪಾಲದಲ್ಲಿ ನಿಧನರಾದರು. ಅವರು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

❊ ❊ ❊



**ಶ್ರೀಮತಿ ಗಿರಿಜಾ ಎಸ್. ರಾವ್** (89) ತಾ. 20–03–2025ನೇ ಗುರುವಾರ ಪುತ್ತೂರು ಇಲ್ಲಿ ನಿಧನರಾದರು. ಅವರು ನಾಲ್ವರು ಪುತ್ರರನ್ನು ಅಗಲಿದ್ದಾರೆ.

❊ ❊ ❊



ನಾರಾವಿ ಈದು ಗ್ರಾಮದ ಸಂಕಯ್ಯಹಿತ್ಲು ನಿವಾಸದಲ್ಲಿರುವ ಇಂಜಿನಿಯರ್ ಹಾಗೂ ವಾಸ್ತುತಜ್ಞರಾದ **ಭಾಸ್ಕರ್ ರಾವ್** (68) ಇವರು ದಿನಾಂಕ 4–3–2025ನೇ ಮಂಗಳವಾರ ನಿಧನರಾದರು.

ಇವರು ಮಂಗಳೂರಿನ ಅಂತರಾಷ್ಟ್ರೀಯ ಖ್ಯಾತಿಯ ಇನ್ವೆಂಜರ್ ಕಂಪನಿಯಲ್ಲಿ ಕಳೆದ ಹಲವು ವರ್ಷಗಳಿಂದ ನಿರ್ದೇಶಕರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಇವರು ನೂರಾರು ಹೊಸ ಮನೆಗಳ ನಿರ್ಮಾಣಕ್ಕೆ ಉಚಿತವಾಗಿ ಮಾರ್ಗದರ್ಶನ, ವಾಸ್ತು ಹಾಗೂ ನೀಲನಕಾಶೆಯನ್ನು ನೀಡಿರುತ್ತಾರೆ ಹಾಗೂ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶವನ್ನು ದೊರಕಿಸಿ ಅನೇಕರ ಬಾಳಿಗೆ ಬೆಳಕಾಗಿರುತ್ತಾರೆ. ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ಕ್ಕೂ ದೇಣಿಗೆ ನೀಡಿದ್ದಾರೆ. ಶ್ರೀ ಸೂರ್ಯನಾರಾಯಣ ದೇವಸ್ಥಾನದ ಬಳಿ ನೂತನ ಕಲ್ಯಾಣಮಂಟಪವಿದ್ದು ಅದನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ಸಾರ್ವಜನಿಕ ಸೇವೆಗೆ ಒದಗಿಸಿರುತ್ತಾರೆ. ಇವರು ಪತ್ನಿ, ಮಗ, ಸೊಸೆ, ಮಗಳು, ಮೊಮ್ಮಗಳು, ಮೂವರು ಸಹೋದರಿಯರನ್ನು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

PRAVEEN KUMAR ADYAPADY
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

ಪತ್ರಿಕೆಗೆ ಶುಭ ಬಯಸುವ–
ಶ್ರೀ ಸೋಮಶೇಖರನ್
ಮತ್ತು
ಶ್ರೀಮತಿ ಅರುಣಾ ಸೋಮಶೇಖರನ್
ಚಿಲಿಂಬಿ, ಮಂಗಳೂರು






PRAMOD
AUTOMOBILES
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

PREETHIKA
AUTOMOBILES
✆ 2493633
9845851573
Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003
Dealers in :
Minda Switches, M. K. Products, Swiss Auto Products, Power Coils

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
ರವಿಕಿರಣ್ ಕ್ಯೊಲ, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

NAVADURGA
FINANCIALS
Estd 1998
SCAN ME
TO KNOW
MORE!!!

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವಿದ್ಯಾನಿಧಿ ಸ್ಥಾಪನೆ



ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಪೈಕಾನ ವೆಂಕಟರಮಣಯ್ಯ ಮತ್ತು ಕೂಡ್ಲು ರಮಾಬಾಯಿ ಸ್ಮರಣಾರ್ಥ ಅವರ ಮಕ್ಕಳು ಈ ಹಿಂದೆ ರೂ. 1,05,000/– ದೇಣಿಗೆ ನೀಡಿ ವಿದ್ಯಾನಿಧಿಯನ್ನು ಆರಂಭಿಸಿದ್ದು, ಈಗ ಅದಕ್ಕೆ ಅವರ ಮಕ್ಕಳಾದ ಶ್ರೀ ಪಿ. ಶ್ರೀಕಾಂತ್ ರಾವ್, ಶ್ರೀಮತಿ ಉಷಾ ಪ್ರಭಾಕರ್, ಶ್ರೀಮತಿ ವಸಂತಿ ಶಂಕರ್, ಶ್ರೀಮತಿ ಸರೋಜಾ ಗಣೇಶ್ ರೂ. 17,000–00ನ್ನು ದೇಣಿಗೆ ನೀಡಿ ಅದನ್ನು ಒಟ್ಟು ರೂ. 2,43,000/–ಕ್ಕೆ ಹೆಚ್ಚಿಸಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಧನ್ಯವಾದಗಳು.



ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಶ್ರೀಮತಿ 'ಎಲ್ಲೂರು ಸೀತಮ್ಮ ಪದ್ಮನಾಭ ಶರ್ಮ ವಿದ್ಯಾರ್ಥಿವೇತನ ನಿಧಿ'ಯನ್ನು ಇವರ ಸ್ಮರಣಾರ್ಥ ಮಕ್ಕಳು ರೂ. 1,47,020/– ಲಕ್ಷದ ನಿಧಿಯನ್ನು ಸ್ಥಾಪಿಸಿದ್ದು, ಈಗ ಅದಕ್ಕೆ ಪುತ್ರ ಶ್ರೀ ಎ. ಪಿ. ಉಮಾಕಾಂತ ಶರ್ಮಾ ರೂ. 52,980/ನ್ನು ಸೇರಿಸಿ ಒಟ್ಟು ರೂ. 2 ಲಕ್ಷಕ್ಕೆ ಹೆಚ್ಚಿಸಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಧನ್ಯವಾದಗಳು.

ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಶ್ರೀಮತಿ ನಾಗವೇಣಿ ಮತ್ತು ಶ್ರೀ ರಾಮಕೃಷ್ಣಯ್ಯ ಸ್ಮರಣಾರ್ಥ ರೂ. 50,000/– ದೇಣಿಗೆ ನೀಡಿ ವಿದ್ಯಾರ್ಥಿವೇತನ ನಿಧಿಯನ್ನು ಸ್ಥಾಪಿಸಿದ್ದು ಇದೀಗ ಅವರ ಮಗಳು ಶ್ರೀಮತಿ ಪ್ರೇಮಾ ಬಾಯಿ ಕಾರ್ಕಳ ಅದಕ್ಕೆ ರೂ. 40,000/–ವನ್ನು ಸೇರಿಸಿ ಒಟ್ಟು ರೂ. 90,000/ಕ್ಕೆ ಹೆಚ್ಚಿಸಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಧನ್ಯವಾದಗಳು. ಈ ಬಾರಿ ತಾ. 2–02–25ರಂದು ನಡೆದ 'ಸ್ಕಾಲರ್ಸ್ ಡೇ' ದಿನದಂದು ಶ್ರೀ ಸುಬ್ರಹ್ಮಣ್ಯ ಸಭಾ ವತಿಯಿಂದ 114 ವಿದ್ಯಾರ್ಥಿಗಳಿಗೆ ಒಟ್ಟು ರೂ. 5,31,500/– ಸ್ಕಾಲರ್‌ಶಿಪ್ ವಿತರಿಸಲಾಗಿದೆ. ಇದರಲ್ಲಿ ವಿಶೇಷವಾಗಿ ವೇದ ಮತ್ತು ಸಂಸ್ಕೃತ ಕಲಿಕೆಯನ್ನು ಉತ್ತೇಜಿಸಲು ವಿದ್ಯಾರ್ಥಿವೇತನ ನೀಡಲಾಗಿದೆ. 70 ವಿದ್ಯಾರ್ಥಿಗಳಿಗೆ ರೂ. 71,80,000/– ಸಾಲ ವಿದ್ಯಾರ್ಥಿವೇತನ ನೀಡಲಾಗಿದೆ ಹಾಗೂ 11 ವಿದ್ಯಾರ್ಥಿಗಳಿಗೆ ರೂ. 1,80,000/– ಮೌಲ್ಯದ ಲ್ಯಾಪ್‌ಟಾಪನ್ನು ವಿತರಿಸಲಾಗಿದೆ.



## ಬಂದೆಯಾ ಬಾಳಿನ ಬೆಳಕಾಗಿ...

**ಶ್ರೀ ಮಂಜುನಾಥ ರಾವ್** (ಕುಂಜಾರುಗಿರಿ ನರಸಿಂಹ ರಾವ್ ಮತ್ತು ಶ್ರೀಮತಿ ಜಯಲಕ್ಷ್ಮಿ ರಾವ್ ಇವರ ಪುತ್ರ) ಇವರ ಧರ್ಮಪತ್ನಿ **ಶ್ರೀಮತಿ ರೂಪಶ್ರೀ** (ಶ್ರೀ ಶ್ರೀಧರ ರಾವ್ ಎ. ಮತ್ತು ಹರಿಣಾಕ್ಷಿ ರಾವ್ ಎಸ್. ಇವರ ಪುತ್ರಿ) ಇವರಿಗೆ ತಾ. 22–03–2025ನೇ ಶನಿವಾರ ಪುತ್ರಿ ಸಂತಾನ ಪ್ರಾಪ್ತವಾಗಿರುತ್ತದೆ.

❖❖❖

**ಶ್ರೀ ರಂಜನ್ ರಾವ್** (ಉಜ್ಜೋಡಿ ರವಿಶಂಕರ್ ಹಾಗೂ ವಿಜಯಲಕ್ಷ್ಮೀ ಇವರ ಪುತ್ರ) ಹಾಗೂ **ಶ್ರೀಮತಿ ಸುಷ್ಮಾ** (ತಂತ್ರಾಡಿ ಶ್ರೀ ದೇವರಾಜ ಶಾನುಭೋಗ್ ಹಾಗೂ ಶ್ರೀಮತಿ ಸುಮಂಗಲಿ ಇವರ ಪುತ್ರಿ) ದಂಪತಿಗಳಿಗೆ ತಾ. 19–03–2025ನೇ ಬುಧವಾರ ಗಂಡು ಮಗುವಿನ ಜನನ.

# ಪೂರ್ಣಿಮ ಮೋಹನ್ ರಾವ್ ಭೋಜನ ಕೊಡುಗೆ

ಪುತ್ತೂರಿನ 'ಶಿವಸದನ'ದಲ್ಲಿ ಶ್ರೀಮತಿ ಪೂರ್ಣಿಮಾ ಮೋಹನ್ ರಾವ್ ತನ್ನ ಮಕ್ಕಳು ಕುಮಾರಿ ಅನುಪಮ ರಾವ್ ಮತ್ತು ಶ್ರೀ ನಿಶಾಂತ್ ರಾವ್ ಬಿ. ಯಂ. ಇವರು ಶಿವಸದನದ ಹಿರಿಯರು, ವಿಶೇಷ ಚೇತನ ಮಕ್ಕಳು ಹಾಗೂ ಶಿಕ್ಷಕರು ಅಲ್ಲಿನ ಸಿಬ್ಬಂದಿ ವರ್ಗದವರಿಗೆ ವಿಶೇಷ ಭೋಜನ ಏರ್ಪಡಿಸಿದ್ದರು. ಅವರು ಪ್ರತೀ ಹಬ್ಬದ ದಿನ ವಿಶೇಷ ಭೋಜನ ಪ್ರಾಯೋಜಿಸಿ ತನ್ನ ಪ್ರೀತಿಯನ್ನು ವ್ಯಕ್ತಪಡಿಸುವ ಮೂಲಕ ಸ್ಪಂದಿಸುತ್ತಿದ್ದರು. ಅವರಿಗೆ ದೇವರು ಶಕ್ತಿ ಕೊಡಲಿ ಇನ್ನು ಮುಂದೆಯೂ ಇಂತಹ ಹಲವು ಕಾರ್ಯಕ್ರಮ ಮುಂದುವರಿಯಲಿ ಎಂದು ಹಿರಿಯರ ಹಾಗೂ ನಮ್ಮೆಲ್ಲರ ಹಾರೈಕೆ.

*ವರದಿ : **ಶ್ರೀಮತಿ ಸುಮಂಗಲಾ ಪ್ರಭಾಕರ್***

ಸುಪ್ರಜಿತ್ ಫೌಂಡೇಶನ್, ಬೆಂಗಳೂರು ಇವರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷಚೇತನರ ವಸತಿನಿಲಯ, ಮುರ, ಪುತ್ತೂರು ಇಲ್ಲಿನ ಎರಡು ಕೋಣೆಗಳನ್ನು ತಲಾ ರೂ. 5 ಲಕ್ಷದಂತೆ ಒಟ್ಟು ರೂ. 10 ಲಕ್ಷ ದೇಣಿಗೆ ನೀಡಿ ಪ್ರಾಯೋಜಿಸಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಪ್ರಣವ ಫೌಂಡೇಶನ್ ಟ್ರಸ್ಟೀ ಹಾಗೂ ಆದಾಯ ತೆರಿಗೆ ಇಲಾಖೆಯ ಜಂಟಿ ಆಯುಕ್ತರಾದ ಶ್ರೀ ಶ್ರೀನಿವಾಸ್ ಮತ್ತು ಶ್ರೀಮತಿ ವೀಣಾ ಶ್ರೀನಿವಾಸ್ ಇವರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿನಿಲಯ 'ಶಿವಸದನ'ಕ್ಕೆ ರೂ. 15,000/– ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಮಹಾರಾಷ್ಟ್ರದ ಅಕೋಲಾ ನಿವಾಸಿ ಪರೀಕ ಶ್ರೀ ರಾಮದಾಸ್ ಶಾನುಭಾಗ್ ಇವರ 80ನೇ ಹುಟ್ಟುಹಬ್ಬ ಸಂದರ್ಭದಲ್ಲಿ ಅವರ ಪುತ್ರ ಶ್ರೀ ಅಮರೇಶ್ ಶಾನುಭಾಗ್ ಇವರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲ ಚೇತನರ ವಸತಿನಿಲಯ 'ಶಿವಸದನ'ಕ್ಕೆ ರೂ. 1,00,001/– (ಒಂದು ಲಕ್ಷದ ಒಂದು) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಮಂಗಳೂರು ನಿವಾಸಿ ಶ್ರೀಮತಿ ವೈಜಯಂತಿ ಬೋನಾಂತ ಇವರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿನಿಲಯ 'ಶಿವಸದನ'ಕ್ಕೆ ರೂ. 12,000/– ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



ಪುತ್ತೂರಿನ 'ಶಿವಸದನ' ವಿಶೇಷಚೇತನರ ಶಾಲೆಯ ಮಕ್ಕಳ ಪಾದರಕ್ಷೆಗಳನ್ನು ಚೊಕ್ಕವಾಗಿ ಜೋಡಿಸಿ ಇಡಲು ಅನುಕೂಲವಾಗುವಂತೆ ಸುಮಾರು ರೂ. 5,000/– ಮೌಲ್ಯದ ಮೂರು ಚಪ್ಪಲಿಸ್ಟ್ಯಾಂಡ್ ಒಬ್ಬರು ಶ್ರೇಯೋಭಿಲಾಷಿ ನೀಡಿರುವರು. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಧನ್ಯವಾದಗಳು. ಈ ಸಂದರ್ಭ ಶ್ರೀ ಸಭಾ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಶಿವಸದನ ಚಾರಿಟೇಬಲ್ ಟ್ರಸ್ಟ್ ಸದಸ್ಯೆ ಶ್ರೀಮತಿ ಶಕುಂತಲಾ ವಿಜಯ ಕುಮಾರ್, ಶ್ರೀಮತಿ ಕವಿತಾ ರಾವ್ ಉಪಸ್ಥಿತರಿದ್ದರು.






# ಪುತ್ತೂರಿನ ಹಿರಿಯ ನಾಗರಿಕರ ವಸತಿ ನಿಲಯದ ಉಸ್ತುವಾರಿ ಸಮಿತಿ 'ಶಿವಸದನ ಚಾರಿಟೇಬಲ್ ಟ್ರಸ್ಟ್'ಗೆ ಸದಸ್ಯರ ಆಯ್ಕೆ



'ಶಿವಸದನ ಚಾರಿಟೇಬಲ್ ಟ್ರಸ್ಟ್'ನ ಮೊದಲ ಸಭೆಯು ತಾ. 26–2–2025ರಂದು ಪುತ್ತೂರಿನ ಮುರದ 'ಶಿವಸದನ'ದಲ್ಲಿ ನಡೆಯಿತು. ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇದರ ಆಡಳಿತ ಮಂಡಳಿಯ ನಿರ್ಣಯದಂತೆ ಕೆಳಗೆ ಕಾಣಿಸಿದ ಸದಸ್ಯರನ್ನು 'ಶಿವಸದನ ಚಾರಿಟೇಬಲ್ ಟ್ರಸ್ಟ್'ನ ಟ್ರಸ್ಟಿಗಳಾಗಿ ಆಯ್ಕೆ ಮಾಡಲಾಗಿತ್ತು.

ಶ್ರೀ ಎಂ. ಎಸ್. ರಘುನಾಥ ರಾವ್, ಶ್ರೀಮತಿ ಸುಮಂಗಲಾ ಪ್ರಭಾಕರ್, ಶ್ರೀ ಕರುಣ್ ರಾವ್ ಬೆಳ್ಳೆ, ಶ್ರೀ ದಿನಕರ್ ರಾವ್, ಶ್ರೀ ಎನ್. ಎಸ್. ನಟರಾಜ್, ಡಾ। ಎ. ಪಿ. ಕೃಷ್ಣ, ಶ್ರೀ ಇನ್ನ ಚಂದ್ರಕಾಂತ ರಾವ್, ಶ್ರೀಮತಿ ವನಿತಾ ಸದಾನಂದ ರಾವ್, ಶ್ರೀಮತಿ ಶಕುಂತಲಾ ವಿಜಯ ಕುಮಾರ್, ಶ್ರೀಮತಿ ಗಾಯತ್ರಿ ಪಿಲಿಂಜ, ಶ್ರೀಮತಿ ರತ್ನ ರಾಜೇಂದ್ರ ರಾವ್, ಶ್ರೀಮತಿ ಸುಮನ ಕೃಷ್ಣ, ಶ್ರೀ ಪಿ. ಶ್ರೀಕಾಂತ ರಾವ್, ಶ್ರೀ ಉದಯಕುಮಾರ್ ರಾವ್, ಶ್ರೀ ಸಾಯಿಪ್ರಸಾದ್, ಶ್ರೀ ಚೇತನ್ ಶರ್ಮ, ಶ್ರೀ ಸಂತೋಷ್ ಕುಮಾರ್ ಯು.

**ಸಭೆಯ ನಡಾವಳಿಗಳು :**

1. ಸಭೆಯು ಬೆಳಗ್ಗೆ 11–00ಕ್ಕೆ ಸಾಮೂಹಿಕ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡಿತು.
2. ಶಿವಸದನದ ಉಸ್ತುವಾರಿಯನ್ನು ಇದು ತನಕ ನೋಡಿಕೊಳ್ಳುತ್ತಿದ್ದ ಶ್ರೀ ಕರುಣ್ ರಾವ್ ಬೆಳ್ಳೆ, ಇವರು ಶಿವಸದನ ಬೆಳವಣಿಗೆಯ ಬಗ್ಗೆ ವಿವರವಾದ ಮಾಹಿತಿಯನ್ನಿತ್ತು ಹೊಸದಾಗಿ ಆಯ್ಕೆಯಾದ ಪದಾಧಿಕಾರಿಗಳು ಮತ್ತು ಟ್ರಸ್ಟಿಗಳು, ತುಂಬುಹೃದಯದಿಂದ ಶಿವಸದನದ ಸರ್ವತೋಮುಖ ಬೆಳವಣಿಗೆಗೆ ಸಹಕರಿಸಬೇಕಾಗಿ ಪ್ರಾರ್ಥಿಸಿದರು.
3. ಟ್ರಸ್ಟ್‌ನ ಕಾರ್ಯನಿರ್ವಹಣೆಗಾಗಿ ಟ್ರಸ್ಟ್ ಡೀಡ್ ಪ್ರಕಾರ ಗೌರವಾಧ್ಯಕ್ಷರು, ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಕೋಶಾಧಿಕಾರಿಗಳ ಆಯ್ಕೆಗಾಗಿ ಸಭೆಯಲ್ಲಿ ಪ್ರಸ್ತಾವ ಮಾಡಲಾಯಿತು.
4. ಶ್ರೀ ಎಂ. ಎಸ್. ರಘುನಾಥ ರಾವ್ ಪುತ್ತೂರು ಇವರು ಗೌರವಾಧ್ಯಕ್ಷರಾಗಿ ಒಮ್ಮತದಿಂದ ಆಯ್ಕೆಯಾದರು. ಅಧ್ಯಕ್ಷರಾಗಿ ಶ್ರೀಮತಿ ಸುಮಂಗಲ ಪ್ರಭಾಕರ್ ಇವರನ್ನು ಆಯ್ಕೆ ಮಾಡಲಾಯಿತು. ಕಾರ್ಯದರ್ಶಿಯಾಗಿ ಶ್ರೀ ಕರುಣ್ ರಾವ್ ಬೆಳ್ಳೆ ಇವರನ್ನು ಆರಿಸಲಾಯಿತು. ಕೋಶಾಧಿಕಾರಿಯಾಗಿ ಶ್ರೀ ದಿನಕರ್ ರಾವ್ ಮುಕ್ರಂಪಾಡಿ ಇವರನ್ನು ಆಯ್ಕೆ ಮಾಡಲಾಯಿತು.
5. ಧನ್ಯವಾದ ಸಮರ್ಪಣೆಯೊಂದಿಗೆ ಸಭೆಯು ಮಧ್ಯಾಹ್ನ ಗಂಟೆ 12:30ಕ್ಕೆ ಮುಕ್ತಾಯಗೊಂಡಿತು.

*ಎಲ್ಲರಿಗೂ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅಭಿನಂದನೆಗಳು.*

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು – ಯುವ ವೇದಿಕೆಯ ಸಭೆ



ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇಲ್ಲಿ ನಡೆದ ಯುವವೇದಿಕೆಯ ಸಭೆಯಲ್ಲಿ ನೂತನ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ ಹಾಗೂ ಜತೆಕಾರ್ಯದರ್ಶಿಯರನ್ನು ನೇಮಿಸಲಾಯಿತು.

ಅಧ್ಯಕ್ಷರಾಗಿ : **ಶ್ರೀ ಜನಕರಾಜ್**, ಉಪಾಧ್ಯಕ್ಷರಾಗಿ : **ಶ್ರೀ ರಾಕೇಶ್ ಕುಡುಪು**, ಕಾರ್ಯದರ್ಶಿಯಾಗಿ : **ಶ್ರೀ ಸಾಯಿಪ್ರಸಾದ್**, ಜತೆಕಾರ್ಯದರ್ಶಿಯಾಗಿ : **ಶ್ರೀ ಪ್ರಶಾಂತ್ ರಾವ್** ಆಯ್ಕೆಯಾದರು.

## ಗ್ರೈಂಡರ್ ಕೊಡುಗೆ



ಪ್ರಖ್ಯಾತ ಕ್ಯಾಟರಿಂಗ್ ಸಂಸ್ಥೆ 'ರಾವ್ ಕ್ಯಾಟರಿಂಗ್'ನ ಮ್ಹಾಲಕರಾದ ಶ್ರೀ ರಾಕೇಶ್ ಕುಡುಪು ಇವರು ಶ್ರೀ ಸುಬ್ರಹ್ಮಣ್ಯ ಸಭಾದ ಅಡುಗೆ ಕೋಣೆಗೆ ಅಗತ್ಯವಾಗಿರುವ ಗ್ರೈಂಡರ್‌ಗಾಗಿ ರೂ. 5,000/– ದೇಣಿಗೆಯನ್ನು ನೀಡಿರುತ್ತಾರೆ. ಅವರಿಗೆ ಶ್ರೀ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.

Prop: Somashekhar
Mob: 9844551244
WONDER CREATION
Decor & Event planners
Our Services :-
- Corporate Events
- All Types Of Stage Decoration
- Sounds And Lights
- Led Wall Rentals
- Selfie Booth Concept
- Shamiyana/Tint Sheet/Plat Form Chairs/Round Table etc....
- Photography & Videography
2T-145-3A, Kulai Gudde Road, Kulai, Surathkal

Manish Rao U.
Tel : (O) 2223301
Mobile : 9448726499 / 8884284939
NAVA COMPUTERS
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
Authorised Dealers for :
Vijai Super GP 150 &
Vikram 3 Wheelers (Petrol & Diesel)

ಪತ್ರಿಕೆಗೆ ಶುಭ ಬಯಸುವ–
ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

ಪತ್ರಿಕೆಗೆ ಶುಭ ಬಯಸುವ–
ಶ್ರೀ ಕಾಂತಾವರ ಜಯಪ್ರಕಾಶ್
ಮತ್ತು ಶ್ರೀಲತಾ ಹಾಗೂ
ತನ್ವಿ, ನಿವೇದ, ದೃತಿ ಮತ್ತು ದ್ರುವ್

ಪತ್ರಿಕೆಗೆ ಶುಭ ಬಯಸುವ–
ಶ್ರೀ ನಾಗರಾಜ್ ಶರ್ಮ
ಹಾಗೂ
ಶ್ರೀಮತಿ ಆರತಿ ಶರ್ಮ
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

Sri Hari Adyapady
Proprietor
Ph : 0824-2251597 (R)
2252119 (O)
Mobile : 9448344612
9964072489
SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE
We undertake all types of Electrical, Plumbing and Sanitary works

# ಪುತ್ತೂರು ಹಿರಿಯ ನಾಗರಿಕರ ಮತ್ತು ವಿಶೇಷಚೇತನರ ವಸತಿನಿಲಯ 'ಶಿವಸದನ' ಇದರ ನಾಲ್ಕನೆಯ ಅಂತಸ್ತಿನ ಉದ್ಘಾಟನೆ







ಪುತ್ತೂರು ಶ್ರೀ ಸುಬ್ರಹ್ಮಣ್ಯ ಸಭಾ ಚಾರಿಟೇಬಲ್ ಟ್ರಸ್ಟ್ (ರಿ.), ಮಂಗಳೂರು ಇದರ ವತಿಯಿಂದ ನಡೆಸಲ್ಪಡುವ ಹಿರಿಯ ನಾಗರಿಕರು ಮತ್ತು ವಿಶೇಷಚೇತನರ ವಸತಿನಿಲಯ ಶಿವಸದನ ಪುತ್ತೂರಿನ ಮುರದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಇದರ ಸುಸಜ್ಜಿತವಾದ ನಾಲ್ಕನೆಯ ಅಂತಸ್ತು ದಿನಾಂಕ 01–03–2025ರಂದು ಉದ್ಘಾಟನೆಗೊಂಡಿತು.

ಪ್ರಖ್ಯಾತ ಬಹುರಾಷ್ಟ್ರೀಯ ಕಂಪೆನಿ IQVIA ಇದರ ಪ್ರಾಯೋಜಕತ್ವದಲ್ಲಿ ಸಜ್ಜು ಗೊಂಡಿರುವ ಈ ಮಹಡಿಯನ್ನು ದೀಪಪ್ರಜ್ವಲನೆ ಮತ್ತು ರಿಬ್ಬನ್ ಬಿಡಿಸುವ ಮೂಲಕ IQVIA ಇದರ ನಿರ್ದೇಶಕರಾದ ಶ್ರೀ ನಿಶಾಂತ್ ರಾವ್ ಉದ್ಘಾಟಿಸಿ ಪ್ರಸ್ತುತ ಸಮಾಜದಲ್ಲಿ ಬಹಳಷ್ಟು ಜನರು ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿರುವುದು ಕಂಡುಬರುತ್ತದೆ. ಅಂತವರಿಗೆ ಈ ವಸತಿನಿಲಯವು ಸೂಕ್ತ ರೀತಿಯಲ್ಲಿ ಆಶ್ರಯವನ್ನು ಕಲ್ಪಿಸಿ ಮಾನವೀಯ ಸೇವೆಯನ್ನು ನೀಡುವಂತಾಗಲಿ ಎಂದು ಹೇಳಿ ಶುಭಹಾರೈಸಿದರು.

ಈ ಕಾರ್ಯಕ್ರಮದಲ್ಲಿ ಅಭ್ಯಾಗತರಾಗಿ ಭಾಗವಹಿಸಿದ IQVIA ಇದರ ಹಿರಿಯ ಪ್ರಬಂಧಕರಾದ ಶ್ರೀ ಸ್ವಾಮಿ ರುದ್ರ ಮಾತನಾಡಿ ಈ ವಸತಿನಿಲಯದ ಮೇಲಿನ ಅಂತಸ್ತು ಅತ್ಯಂತ ಕಡಿಮೆ ಅವಧಿಯಲ್ಲಿ ಸಿದ್ಧಗೊಂಡಿರುವುದು ಸಂತೋಷದ ಸಂಗತಿಯಾಗಿದೆ. ಭವಿಷ್ಯದಲ್ಲಿ ಈ ವಸತಿನಿಲಯವು ಅಗತ್ಯವಿರುವವರಿಗೆ ಹೆಚ್ಚಿನ ಸೇವೆಯನ್ನು ನೀಡುವಂತಾಗಲಿ ಎಂದು ಹೇಳಿ ವಸತಿನಿಲಯದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕರ್ತರಲ್ಲಿ ಅಭ್ಯಾಗತರಾಗಿ ಭಾಗವಹಿಸಿದ 'ರಾಮಕೃಷ್ಣ ಮಿಷನ್ ಸ್ವಚ್ಛ ಮಂಗಳೂರು' ಅಭಿಯಾನದ ಸಂಚಾಲಕರಾದ ಶ್ರೀ ರಂಜನ್ ಬೆಳ್ಳರ್ಪಾಡಿ ಮಾತನಾಡಿ ನಾವೆಲ್ಲರೂ ಉತ್ತಮ ಸೇವಾ ಮನೋಭಾವವನ್ನು ಹೊಂದುವ ಮೂಲಕ ಇತರರಿಗೆ ಸಹಕಾರಿಯಾಗಬೇಕು. ಈ ಶಿವಸದನವು ಇನ್ನಷ್ಟು ಹೆಚ್ಚಿನ ಸೇವೆ ನೀಡುವಂತಾಗಲಿ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶ್ರೀ ಶಿವಸದನ ಚಾರಿಟೇಬಲ್ ಟ್ರಸ್ಟ್‌ನ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ತಮ್ಮ ಪ್ರಸ್ತಾವನೆಯಲ್ಲಿ ಶಿವಸದನದ ಆರಂಭ, ಹಂತ ಹಂತವಾಗಿ ಬೆಳೆದು ಬಂದ ರೀತಿ, ಸಹಕರಿಸಿದ ದಾನಿಗಳು ಮುಂದಿನ ಯೋಜನೆಗಳ ಕುರಿತು ವಿವರವಾದ ಚಿತ್ರಣವನ್ನು ನೀಡಿ ಸಹಕರಿಸುವಂತೆ ವಿನಂತಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇದರ ಅಧ್ಯಕ್ಷರಾದ ಡಾ. ಎ. ಪಿ. ಕೃಷ್ಣ ಶಿವಸದನ ಪ್ರಗತಿಗೆ ಕಾರಣರಾದ ಎಲ್ಲರನ್ನೂ ಸ್ಮರಿಸಿ ಶುಭ ಹಾರೈಸಿದರು. ವೇದಿಕೆಯಲ್ಲಿ ಶ್ರೀ ಶಿವಸದನ ಚಾರಿಟೇಬಲ್ ಟ್ರಸ್ಟ್‌ನ ಗೌರವಾಧ್ಯಕ್ಷರು ಶ್ರೀ ಎಂ. ಎಸ್. ರಘುನಾಥ ರಾವ್ ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇದರ ವತಿಯಿಂದ ಶಿವಸದನ ವಸತಿನಿಲಯದ ನೌಕರರ ಮಕ್ಕಳಿಗೆ ವಿದ್ಯಾರ್ಥಿವೇತನವನ್ನು ವಿತರಿಸಲಾಯಿತು. ಇದರ ವಿವರವನ್ನು ಟ್ರಸ್ಟಿ ಆಗಿರುವ ಶ್ರೀಮತಿ ಶಕುಂತಲಾ ವಿಜಯಕುಮಾರ್ ಮಂಡಿಸಿ ಡಾ. ಎ. ಪಿ. ಕೃಷ್ಣ ಶ್ರೀ ಸುಬ್ರಹ್ಮಣ್ಯ ಸಭಾಸದನದ ಅಧ್ಯಕ್ಷರು ಮಕ್ಕಳಿಗೆ ವಿತರಿಸಿದರು.

ಪುತ್ತೂರಿನ ಮಿತ್ರ ಸಮಾಜ ಭಜನಾ ಮಂಡಳಿ ಸದಸ್ಯರೊಂದಿಗೆ ಶಿವರಂಜಿನಿ ಕಲಾಕೇಂದ್ರ ಪೊಳಲಿ / ಬೊಕ್ಕಸ, ಶ್ರೀ ಶಾರದಾಂಬ ಭಜನಾ ಮಂಡಳಿ, ಮಂಗಳೂರು ಇವರಿಂದ ಭಜನಾ ಕಾರ್ಯಕ್ರಮ ನಡೆಯಿತು. ಇದೇ ಸಂದರ್ಭದಲ್ಲಿ ಶಿವಸದನಕ್ಕೆ ಧನಸಹಾಯ ಮಾಡುವ ಸದುದ್ದೇಶದಿಂದ ರೂ. ಒಂದು ಲಕ್ಷ ಚೆಕ್ ನೀಡಿದ ಶ್ರೀ ಸುಬ್ರಹ್ಮಣ್ಯ ಸಭಾದ ಸದಸ್ಯ ಹಾಗೂ ಭಾರತೀಯ ಸ್ಟೇಟ್ ಬ್ಯಾಂಕ್ ನಿವೃತ್ತ ಅಧಿಕಾರಿ ಶ್ರೀ ಜಯಚಂದ್ರ ಬಿ. ವಿ. ಮಂಗಳೂರು ಇವರನ್ನು ಹೂಗುಚ್ಛ ನೀಡಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ರೂ. ಐದು ಲಕ್ಷ ಧನಸಹಾಯ ನೀಡುವುದಾಗಿ ಘೋಷಣೆ ಮಾಡಿದ ಶ್ರೀ ರವೀಂದ್ರನಾಥ ಬೆಳ್ಳೆ ಅವರ ಮಗ ಶ್ರೀ ರಾಹುಲ್ ಬೆಳ್ಳೆ ಮತ್ತು ಅವರ ಕುಟುಂಬದವರನ್ನು ವಿಶೇಷವಾಗಿ ಗೌರವಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಆಲಮರ ಫೌಂಡೇಶನ್, ಬೆಂಗಳೂರು ಇದರ ಟ್ರಸ್ಟಿಗಳು ವಿಶೇಷಚೇತನರು ತಯಾರಿಸಬಹುದಾದ ವಿವಿಧ ರೀತಿಯ ಕರಕುಶಲ ವಸ್ತುಗಳ ತಯಾರಿಯ ಬಗ್ಗೆ ಪ್ರಾತ್ಯಕ್ಷಿಕೆ ನೀಡಿದರು. ಸಭಾ ಕಾರ್ಯಕ್ರಮದ ಆರಂಭದಲ್ಲಿ ಡಾಕ್ಟರ್ ಗಾನ ಪಿಲಿಂಜಾ ಅವರು ತಮ್ಮ ಅರ್ಥಪೂರ್ಣವಾದ ಸ್ವಾಗತ ನೃತ್ಯದ ಮೂಲಕ ಮನರಂಜನೆಯನ್ನು ನೀಡಿದರು. ಬಳಿಕ ಶಿವಸದನದ ವಿಶೇಷಚೇತನ ವಿದ್ಯಾರ್ಥಿಗಳಿಂದ ಅಭಿನಯ ಗೀತೆ ಮತ್ತು ಅಭಿನಯ ನೃತ್ಯ ಪ್ರದರ್ಶನಗೊಂಡಿತು.



ಶಿವಸದನದ ಹಿರಿಯ ನಾಗರಿಕರೊಂದಿಗೆ ವಿಶೇಷಚೇತನ ಶಾಲೆಯ ಶಿಕ್ಷಕ ವೃಂದದವರು ಡಾ. ಗಾನ ಪಿಲಿಂಜ ನಿರ್ದೇಶನದಲ್ಲಿ ಪ್ರಾರ್ಥನಾ ಗೀತೆಯನ್ನು ಹಾಡಿದರು. ಶ್ರೀ ಶಿವಸದನ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ಅತಿಥಿ ಅಭ್ಯಾಗತರನ್ನು ಪರಿಚಯಿಸಿ ಸ್ವಾಗತಿಸಿದರು. ಈ ಸಮಾರಂಭದಲ್ಲಿ ವೇದಮೂರ್ತಿ ಶ್ರೀ ಸೂರ್ಯನಾರಾಯಣ ಭಟ್, ಬೆಂಗಳೂರಿನ ಅಖಿಲ ಭಾರತ ಸ್ಥಾನಿಕ ಸಭಾ ಇದರ ಅಧ್ಯಕ್ಷರಾದ ಶ್ರೀ ರವೀಂದ್ರನಾಥ ಬೆಳ್ಳೆ ದಂಪತಿಗಳು, ಹಿರಿಯ ನಾಗರಿಕರು, ವಿಶೇಷಚೇತನರು ಹಾಗೂ ಅವರ ಪೋಷಕರು, ಕ್ರಿಯಾಶೀಲ ಮನೋಭಾವದ ಸಿಬ್ಬಂದಿ ವರ್ಗ, ಸ್ಪೆಷಲ್ ಟೀಚರ್ಸ್, ಛಾಯಾಚಿತ್ರಗಳನ್ನು ಒದಗಿಸಿದ ನಿರ್ದೇಶಕರಾದ ಶ್ರೀ ರಘುವೀರ ರಾವ್, ಶಿವಸದನವನ್ನು ಸುಂದರ ಹೂವುಗಳಿಂದ ಸಿಂಗರಿಸಿದ ಆತ್ಮೀಯ ಶ್ರೀ ಮೋಹನ್‌ದಾಸ್ ಪಿಲಿಂಜ, ರುಚಿಯಾದ ಉಪಾಹಾರ ಒದಗಿಸಿದ ಶ್ರೀ ಶ್ರೀಪತಿ ರಾವ್, ಸುಬ್ರಹ್ಮಣ್ಯ ಸದನದ ಆಡಳಿತ ಮಂಡಳಿ ಹಾಗೂ ಸದಸ್ಯರು, ಸುಬ್ರಹ್ಮಣ್ಯ ಸದನದ ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಜಯಂತಿ ವಿನೋದ ರಾವ್ ಹಾಗೂ ಸದಸ್ಯರು, ಶಿವಸದನ ಟ್ರಸ್ಟಿನ ಸದಸ್ಯರು, ಪುತ್ತೂರಿನ ಸಂಘದ ಸದಸ್ಯರು, ದಾನಿಗಳು ಭಾಗವಹಿಸಿದ್ದರು.

ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇದರ ಕಾರ್ಯದರ್ಶಿ ಶ್ರೀ ಉದಯಕುಮಾರ್ ರಾವ್ ವಂದನಾರ್ಪಣೆಗೈದರು. ಟ್ರಸ್ಟಿನ ಕೋಶಾಧಿಕಾರಿ ಶ್ರೀ ದಿನಕರ್ ರಾವ್ ಕಾರ್ಯಕ್ರಮ ನಿರೂಪಿಸಿದರು.

*ಛಾಯಾಚಿತ್ರ : **ಶ್ರೀ ರಘುವೀರ ರಾವ್ ಪೆರ್ಡೂರು***


Freelance Makeup & Hairstyle Artistry
Swapna_rao_makeoverartistry
BRIDAL / PRE / POST WEDDING FUNCTIONS / OTHER PERSONAL EVENTS & PARTIES
Rental Jewellery / Saree Pre-pleating Service available
For Bookings and Enquiries
Swapna Vallish : 9972465209 / 7892235761

ರಾಮಾ ಅಟೋಮೊಬೈಲ್ಸ್
ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

# ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ಸಹಾಯಹಸ್ತ

ಬೆಳ್ಮಣ್ ನಿವಾಸಿ ಕೀರ್ತಿಶೇಷ ಬೆಳ್ಮಣ್ ವ್ಯಾಸರಾವ್ ಮತ್ತು ಕೀರ್ತಿಶೇಷ ಗಿರಿಜಮ್ಮ ಇವರ ಸ್ಮರಣಾರ್ಥ ಅವರ ಪುತ್ರ ಮಂಗಳೂರು ನಿವಾಸಿ ಶ್ರೀ ಜಯಚಂದ್ರ ಬಿ. ವಿ., ಸ್ಟೇಟ್ ಬ್ಯಾಂಕ್ ನಿವೃತ್ತ ಅಧಿಕಾರಿ ಹಾಗೂ ಸೊಸೆ ಶ್ರೀಮತಿ ಸಪ್ನ ಜೆ., ಕೆನರಾ ಬ್ಯಾಂಕ್ ಉದ್ಯೋಗಿ, ಮೊಮ್ಮಕ್ಕಳು ಶ್ರೀಮತಿ ನಿಕಿತಾ ರಾವ್ ಮತ್ತು ಕುಮಾರಿ ನಿಧಿ ರಾವ್ ಇವರಿಂದ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿನಿಲಯ 'ಶಿವಸದನ'ಕ್ಕೆ ರೂ. **1,00,000/-** (ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.


ಚಿತ್ರ : ಶ್ರೀ ರಘುವೀರ್ ಪೆರ್ಡೂರು



Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri


*Publisher : Dr. A. P. Krishna, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*
*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*